ದಿನಾಂಕ 17.07.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನವನ್ನು ಭೋಧಿಸಲಾಯಿತು.

ಪಾಟೀ ಸವಾಲು : ಎದುರುದಾರರ ಪರ ಶ್ರೀ.ಎಸ್ ಎಸ್ ವಕೀಲರಿಂದಃ

ನನ್ನ ತಾಯಿ ಎದುರುದಾರರ ವಿರುದ್ಧ 2012 ರಲ್ಲಿ ದಾವೆ ದಾಖಲು ಮಾಡಿದ್ದರು. ದಿ 18.01.2022 ರಲ್ಲಿ ನಮ್ಮ ವಿರುದ್ದ ಡಿಕ್ರಿ ಆಗಿರುವ ವಿಚಾರ ಗೊತ್ತು. ಆದಾದ 4 ತಿಂಗಳ ನಂತರ ಈ ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೇ ಹೌದು. ಅಪೀಲು ಮೆಮೋದಲ್ಲಿರುವ ಬರೆದಿರುವ ವಿಚಾರಗಳನ್ನು ತಿಳಿದುಕೊಂಡಿದ್ದೇನೆ. ಅಪೀಲು ಮೆಮೋದಲ್ಲಿ ಅಪೀಲು ಸಲ್ಲಿಸಲು 4 ತಿಂಗಳ ಕಾಲ ವಿಳಂಬದ ಬಗ್ಗೆ ಯಾವುದೇ ವಿವರಗಳನ್ನು ತಿಳಿಸಿಲ್ಲ ಎಂದರೇ ಹೌದು. ನನ್ನ ಪ್ರಮಾಣ ಪತ್ರ ಹಾಗೂ ಎಸ್ ಪಿ ಎದಲ್ಲಿರುವ ಬರೆದಿರುವ ವಿಚಾರಗಳನ್ನು ತಿಳಿದುಕೊಂಡಿದ್ದೇನೆ. ನನ್ನ ಪ್ರಮಾಣ ಪತ್ರ ಹಾಗೂ ಎಸ್ ಪಿ ಎ ನನ್ನ ತಾಯಿ ಯಾವ ಕಾರಣಕ್ಕೆ ಎಸ್ ಪಿ ಎ ಕೊಟ್ಟಿದ್ದಾರೆ ಎಂದು ಬರೆಸಿದ್ದೀರ ಎಂದರೇ ಇಲ್ಲ. ನನ್ನ ತಾಯಿಗೆ ವಯಸ್ಸಾಗಿದೆ, ಕಣ್ಣು ಕಾಣುವುದಿಲ್ಲ, ಕಿವಿ ಕೇಳುವುದಿಲ್ಲ ಎಂಬುದಕ್ಕೆ ಯಾವುದೇ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿಲ್ಲ.

2. ನಿಮ್ಮ ಪ್ರಮಾಣ ಪತ್ರದಲ್ಲಿ ಖಾನೇಷುಮಾರಿ ಸಂಖ್ಯೆ 25/3 ವಿಸ್ತೀರ್ಣ ಪೂರ್ವ-ಪಶ್ಚಿಮ 15 ಅಡಿ, ಉತ್ತರ-ದಕ್ಷಿಣ 60 ಅಡಿ ಎಂದು ಬರೆಸಿದ್ದೀರಿ ಎಂದರೇ ಹೌದು. ಮೂಲ ದಾವೆ ಸಂಖ್ಯೆ 121/2012 ನ್ನು ಈ ಮೇಲೆ ಹೇಳಿದ ಸ್ವತ್ತಿಗೆ ಸಂಬಂದ ಪಟ್ಟಂತೆ ದಾಖಲು ಮಾಡಿಲ್ಲ ಎಂದರೇ ಹೌದು. ಉದ್ದೇಶ ಪೂರ್ವಕವಾಗಿ ಪ್ರತಿವಾದಿ ಮತ್ತು ಅವರ ವಾರಸುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದ ಮೇರೆಗೆ ಬೆರಳಚ್ಚು ಮಾಡಲಾಯಿತು.)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

( ಎದುರುದಾರರು ಮಧ್ಯಂತರ ಅರ್ಜಿ ಒಂದಕ್ಕೆ ತಕರಾರು ಅರ್ಜಿ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.)

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.)

( ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

( ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)